**O.S. 369-19 PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 23.10.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ L V M, ವಕೀಲರಿಂದಃ**

2. ನಮ್ಮ ತಂದೆ - ತಾಯಿಗೆ ನಾವು 5 ಜನ ಮಕ್ಕಳು. 4 ಜನ ಹೆಣ್ಣು ಮಕ್ಕಳು ಹಾಗೂ ಒಬ್ಬ ಗಂಡು ಮಗ. ನಮ್ಮ 5 ಜನರ ಮೇಲೆ ನಮ್ಮ ತಂದೆ - ತಾಯಿ ಪ್ರೀತಿಯಿಂದ ಇದ್ದರು. ನನ್ನ ತಮ್ಮ ನಮ್ಮ ತಂದೆ - ತಾಯಿಗೆ 4 ನೇ ಮಗ. 4 ಜನ ಹೆಣ್ಣು ಮಕ್ಕಳ ಮದುವೆಯಾದ ನಂತರ ನನ್ನ ತಮ್ಮನ ಮದುವೆಯಾಯಿತು ಅಂದರೆ ಸರಿ. ದಾವಾ ಆಸ್ತಿ ಎಲ್ಲಿವೆ ಅಂತಾ ಹೇಳುತ್ತೇನೆ, ಆದರೆ ಸರ್ವೆ ನಂಬರ ಗೊತ್ತಿಲ್ಲ. ಕೋಟಮಚಗಿ ಗ್ರಾಮದ ದಾವಾ ಆಸ್ತಿ ಕ್ರಮ ಸಂಖ್ಯೆ 4 ಎ, ಇದರ ಸರ್ವೆ ನಂಬರ ಹೇಳಲಾಗುವುದಿಲ್ಲ, ಆದರೆ ವಿಸ್ತೀರ್ಣ ಹೇಳಬಲ್ಲೆ, ಅದು 9 ಎಕರೆ ಇದೆ. ಅದು 9 ಎಕರೆ ಇಲ್ಲ ಅಂದರೆ ಸರಿಯಲ್ಲ. ವಕೀಲರಿಗೆ ದಾವೆ ಬರೆಯಲು ನಾವೇ ಮಾಹಿತಿ ನೀಡಿರುತ್ತೇವೆ. ನಮ್ಮ ಮಾಹಿತಿ ಪ್ರಕಾರ ದಾವಾ ಆಸ್ತಿ ಕ್ರಮಸಂಖ್ಯೆ 4 ಎ, 6 ಎಕರೆ ಇದೆ ಅಂದರೆ ಸರಿ. ಕ್ರಮಸಂಖ್ಯೆ 4 ಎ, ಹೊಲದ ಚಕ್ಕುಬಂದಿ ಹೇಳಲು ಬರುವುದಿಲ್ಲ. ನಾವು ಸಣ್ಣವರಿದ್ದಾಗ ಆ ಹೊಲಕ್ಕೆ ಹೋಗುತ್ತಿದ್ದೆವು. ನನಗೆ 10 – 15 ವರ್ಷಗಳು ಇದ್ದಾಗ ಹೋಗಿದ್ದೆನು. ಅದಾದ ನಂತರ 2 ಸಲ ಹೋಗಿರುತ್ತೇನೆ. ನಾನು ಬಿತ್ತುವುದು - ಉಳುವುದು ಆ ಹೊಲದಲ್ಲಿ ಮಾಡಿಲ್ಲವೆಂದರೆ ಸರಿ. ಕೋಟಮಚಗಿ ಹೊಲ ಪಿತ್ರಾರ್ಜಿತ ಆಸ್ತಿ. ಆ ಜಮೀನು ನಮ್ಮ ತಂದೆ ಹೆಸರಿನಲ್ಲಿ ಆಗುವದಕ್ಕಿಂತ ಮುಂಚೆ ನಮ್ಮ ಅಜ್ಜನ ಹೆಸರಿನಲ್ಲಿತ್ತು. ದಾವಾ ಆಸ್ತಿ ಕ್ರಮಸಂಖ್ಯೆ 4 ಎ, ಪಿತ್ರಾರ್ಜಿತ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಕೋಟಮಚಗಿ ಯಲ್ಲಿರುವ ಹೊಲವನ್ನು ನಮ್ಮ ತಂದೆಯ ತಂಗಿ 1985 ರಲ್ಲಿ ನಮ್ಮ ತಂದೆಗೆ ಬಕ್ಷಿಸ ಮಾಡಿದ್ದರು ಅಂದರೆ ಸರಿಯಲ್ಲ. ಬಕ್ಷಿಸ ಮಾಡಿದ ಬಗ್ಗೆ ಮುಟೇಶನ್ ಪ್ರತಿ ಹಾಗೂ ಬಕ್ಷಿಸ ಪತ್ರ ಇವೆ, ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

3. ದಾವಾ ಆಸ್ತಿ ಕ್ರಮಸಂಖ್ಯೆ 4 ಬಿ, ಇದರ ಬಗ್ಗೆ ಮಾಹಿತಿ ಇದೆ. ಇದು 9 ಎಕರೆ ಇದೆ. ಅದರ ಸರ್ವೆ ನಂಬರ ಹಾಗೂ ಚಕ್ಕುಬಂದಿ ಗೊತ್ತಿಲ್ಲ. ಆ ಹೊಲವನ್ನು ನಾನು ವ್ಯವಸಾಯ ಮಾಡಿಲ್ಲ. ನನ್ನ ತಂದೆ 1992 ರಲ್ಲಿ ಸದರಿ ಆಸ್ತಿಯನ್ನು 70 ಸಾವಿರ ರೂ. ಗಳಿಗೆ 3 ನೇ ವ್ಯಕ್ತಿಯಿಂದ ಖರೀದಿ ಮಾಡಿದ್ದರು ಅಂದರೆ ಸರಿಯಲ್ಲ. ಮೊದಲು ಬಳವಟಗಿ ಹೊಲ ನಮ್ಮ ತಾಯಿ ಹೆಸರಿನಲ್ಲಿತ್ತು, ನಂತರ ನಮ್ಮ ತಂದೆ ಮಾಡಿಕೊಂಡಿರುತ್ತಾರೆ.

**O.S. 369-19** **PW : 1**

ಆ ಜಮೀನು ನಮ್ಮ ತಾಯಿಯ ತಂದೆಯದು. ಈ ಹೊಲದ ಬಗ್ಗೆ ಖರೀದಿ ಪತ್ರ, ಮುಟೇಶನ್ ಗಳು ಇವೆ, ಇವೆಲ್ಲ ವಿಷಯ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

4. ದಾವಾ ಆಸ್ತಿ 4 ಸಿ ಆಸ್ತಿ ಬಗ್ಗೆ ಗೊತ್ತು. ಆರ್ ಸಿ ಸಿ ಬಿಲ್ಡಿಂಗ 1 ಗುಂಟೆಯಲ್ಲಿದೆ. ಪ್ಲಾಟ್ ನಂಬರ ನೆನಪಿಲ್ಲ. 20-30 ವರ್ಷಗಳ ಹಿಂದೆ ಆರ್ ಸಿ ಸಿ ಬಿಲ್ಡಿಂಗ ಒಪನಿಂಗ ಆಗಿದೆ. ಅಂದಾಜು 2002-03 ರಲ್ಲಿ ಆಗಿದೆ ಅಂದರೆ ಸರಿ. ಆ ಪ್ಲಾಟುಗಳನ್ನು ನಮ್ಮ ತಂದೆ ತನ್ನ ಹೆಸರಿನಲ್ಲಿ ತೆಗೆದುಕೊಂಡಿದ್ದರು. ನಮ್ಮ ತಾಯಿ ಆಸ್ತಿ ಮಾರಾಟ ಮಾಡಿ ಆರ್ ಸಿ ಸಿ ಬಿಲ್ಡಿಂಗ ಕಟ್ಟಿರುತ್ತಾರೆ. ನಮ್ಮ ತಂದೆ ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ಕೆಲಸ ಮಾಡುತ್ತಿದ್ದರು. ಅದಕಿಂತ ಪೂರ್ವದಲ್ಲಿ ಏರಪೋರ್ಸದಲ್ಲಿದ್ದರು ಅಂದರೆ ಸರಿ. ಅವರಿಗೆ ನಿವೃತ್ತಿ ವೇತನ ಬರುತ್ತಿತ್ತು ಅಂದರೆ ಸರಿ. ನಮ್ಮ ತಂದೆ ನಿವೃತ್ತಿ ವೇತನದಿಂದ ಹಾಗೂ ಹೆಂಡತಿಗೆ ಬಕ್ಷಿಸ ಮಾಡಿದ ಆಸ್ತಿಯಿಂದ ಎಲ್ಲಾ ಆದಾಯಗಳಿಂದ ಎಲ್ಲಾ ದಾವಾ ಆಸ್ತಿಗಳನ್ನು ಖರೀದಿ ಮಾಡಿದ್ದರು ಅಂದರೆ ಸರಿಯಲ್ಲ.

5. ದಾವಾ ಆಸ್ತಿಯ ಕ್ರಮಸಂಖ್ಯೆ 4 ಡಿ, 4 ಪ್ಲಾಟು ನಂಬರ ಹೇಳಲು ಬರುವುದಿಲ್ಲ ಹಾಗೂ ಕ್ಷೇತ್ರ ಹೇಳಲು ಬರುವುದಿಲ್ಲ, ಆದರೆ 4 ಗುಂಟೆ ಇದೆ. ಅದು 6 ಗುಂಟೆ ಇರಬಹುದು. 4 ಪ್ಲಾಟುಗಳನ್ನು ನಮ್ಮ ತಂದೆ ಖರೀದಿ ಮಾಡಿದ್ದರು. ಈ 4 ಪ್ಲಾಟುಗಳು ನನ್ನ ತಮ್ಮನ ಹೆಡಂತಿ ಕಬ್ಜೆಯಲ್ಲಿವೆ. 4 ಪ್ಲಾಟುಗಳ ಪೈಕಿ 2000 ಚದರ ಅಡಿ ಜಾಗವನ್ನು ನಮ್ಮ ತಂದೆ ಎರಡನೇ ವಾದಿಗೆ ಬಕ್ಷಿಸ ಮಾಡಿರುತ್ತಾರೆ ಅಂದರೆ ಸರಿಯಲ್ಲ. ಈಗ ನನ್ನ ತಂಗಿ ಎರಡನೇ ವಾದಿ ಈಶ್ವರನಗರದಲ್ಲಿದ್ದಾರೆ. ಈ ಪ್ಲಾಟದಲ್ಲಿದ್ದಾರೆ ಅಂದರೆ ಅವರು ಖರೀದಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ನನ್ನ ತಂಗಿ ಆ ಜಾಗವನ್ನು ನನ್ನ ತಂದೆ ಕಡೆಯಿಂದ ಖರೀದಿ ಮಾಡಿರುತ್ತಾರೆ. 2011 ರಲ್ಲಿ ಸದರಿ ಮನೆಯನ್ನು ನನ್ನ ತಂಗಿ ಒಪನಿಂಗ ಮಾಡಿರುತ್ತಾರೆ ಅಂದರೆ ಸರಿ. 2000 ಚದರ ಅಡಿ ಜಾಗವನ್ನು ನಮ್ಮ ತಂದೆ ನಮ್ಮ ತಂಗಿಗೆ ಬಕ್ಷಿಸ ಮಾಡಿರುತ್ತಾರೆ ಅಂದರೆ ಸರಿಯಲ್ಲ. ನಮ್ಮ ತಂಗಿ ಖರೀದಿ ಮಾಡಿದ್ದಕ್ಕೆ ದಾಖಲೆ ಹಾಜರಪಡಿಸಿರುತ್ತೇನೆ. ಮುಂದೆ ಆ ದಾಖಲೆ ಕೊಡುತ್ತೇನೆ. 6000 ಚದರ ಅಡಿ ಜಾಗದಲ್ಲಿ 2000 ಚದರ ಅಡಿ ಜಾಗದಲ್ಲಿ ಮೇಲೆ ಹೇಳಿದಂತೆ ಮನೆ ಕಟ್ಟಿದ್ದು, 3000 ಚದರ ಜಾಗವನ್ನು ಬೇರೆಯವರಿಗೆ ಮಾರಾಟ ಮಾಡಿದ್ದಾರೆ ಅಂದರೆ ಸರಿಯಲ್ಲ. ಇನ್ನೊಂದು 1000 ಚದರ ಅಡಿ ಜಾಗದಲ್ಲಿ ಮನೆ ಕಟ್ಟಬೇಕೆಂದು ಪ್ಲಿಂತ ಹಾಕಿರುತ್ತಾರೆ ಅಂದರೆ ಸರಿ. 6000 ಚದರ ಅಡಿ ಜಾಗ ನಮ್ಮ ತಂದೆ ಅಥವಾ ನಮ್ಮ ತಂಗಿ ಹೆಸರಿನಲ್ಲಿ ಇರುವುದಕ್ಕೆ ದಾಖಲೆಗಳನ್ನು ಹಾಜರಪಡಿಸಿರುತ್ತೇನೆ. ಆ ದಾಖಲೆಗಳನ್ನು ನಿಶಾನೆಗಳಲ್ಲಿ ಇಲ್ಲವೆಂದರೆ ಸರಿ, ಆದರೆ ಮುಂದೆ ಹಾಜರಪಡಿಸುತ್ತೇನೆ.

6000 ಚದರ ಅಡಿ ಜಾಗವನ್ನು ನಮ್ಮ ತಂಗಿ ಮೂರನೇ ವ್ಯಕ್ತಿಗೆ ಮಾರಾಟ ಮಾಡಿದ್ದಾಳೆ ಅಂದರೆ ಸರಿಯಲ್ಲ. ನಮ್ಮ ತಂಗಿಗೆ ಕೊಡಬೇಕಾದ ಆಸ್ತಿಯನ್ನು ನಮ್ಮ ತಂದೆ ಕೊಟ್ಟಿದ್ದರಿಂದ ಅವರು ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಲು ಬಂದಿಲ್ಲವೆಂದರೆ ಸರಿಯಲ್ಲ. ಅವರ ಮುಖ್ಯ ವಿಚಾರಣೆಯಾಗಿತ್ತು ಅಂದರೆ ಸರಿ. ಮುಂದೆ ಬರಲಿಲ್ಲವೆಂದರೆ ಸರಿ. ನಮ್ಮ ವಕೀಲರು ಅವರ ಸಾಕ್ಷಿಯನ್ನು ರದ್ದುಪಡಿಸಿರುತ್ತಾರೆ ಅಂದರೆ ಸರಿ. ನಂತರ ನಾನು ಸಾಕ್ಷಿ ನುಡಿದಿರುತ್ತೇನೆ ಅಂದರೆ ಸರಿ. ದಾವಾ ಆಸ್ತಿಗಳು ನಮ್ಮ ತಂದೆಯ ಸ್ವಯಾರ್ಜಿತ ಆಸ್ತಿಗಳಾಗಿದ್ದು, ನಮ್ಮ ಮೇಲಿನ ಪ್ರೀತಿಯಿಂದ ನಮ್ಮ ತಂದೆ ದಾವಾ ಆಸ್ತಿ ಕ್ರಮಸಂಖ್ಯೆ 4 ಡಿ ಯನ್ನು ವಾದಿ ನಂಃ 2 ರವರಿಗೆ ಕೊಟ್ಟಿದ್ದರು ಅಂದರೆ ಸರಿಯಲ್ಲ. ನಮ್ಮ ತಂದೆ 6000 ಚದರ ಅಡಿ ಜಾಗವನ್ನು ನನ್ನ ತಂದೆ 4 ಸೈಟುಗಳಾನ್ನಾಗಿ ಮಾಡಿ ನನಗೆ ಕೊಟ್ಟಿದ್ದರು ಅಂದರೆ ಸರಿಯಲ್ಲ. ನಿಜಾಂಶ ಹೊರಗಡೆ ಬರುತ್ತದೆ ಎಂದು ಆ ಆಸ್ತಿಯನ್ನು ದಾವೆಯಲ್ಲಿ ಸೇರಿಸಿಲ್ಲವೆಂದರೆ ಸರಿಯಲ್ಲ. ನಮ್ಮ ತಂದೆ ಕೊಟ್ಟ ಬಕ್ಷಿಸ ಆಸ್ತಿ ಮೇಲೆ ಒಂದು ಸಾವಿರ ಚದರ ಅಡಿಯ ಜಾಗೆಯಲ್ಲಿ ಮನೆ ಕಟ್ಟಿಸಿ ಭಾಡಿಗೆ ಕೊಟ್ಟಿರುತ್ತೇನೆ ಅಂದರೆ ಸರಿಯಲ್ಲ. ನನ್ನ ಸ್ವಂತ ಹಣದಿಂದ ಖರೀದಿ ಮಾಡಿರುತ್ತೇನೆ. ಆ ಹಣವನ್ನು ನಮ್ಮ ತಂದೆ ಕೊಟ್ಟಿದ್ದರು ಅಂದರೆ ಸರಿಯಲ್ಲ. ನಮ್ಮ ತಂದೆ ಪ್ರತಿವಾದಿ 1 ಹಾಗೂ 2 ರವರಿಗೆ ತಲಾ 2000 ಚದರ ಅಡಿ 2 ಪ್ಲಾಟುಗಳನ್ನು ಕೊಟ್ಟಿದ್ದರು ಅಂದರೆ ಸರಿಯಲ್ಲ.

6. ದಾವಾ ಆಸ್ತಿಗಳು 2007 ರಗಿಂತ ಮುಂಚೆ ನನ್ನ ತಂದೆಯ ಕಬ್ಜೆಯಲ್ಲಿದ್ದವು ಅಂದರೆ ಸರಿ. ಬೆಳವಟಗಿ ಗ್ರಾಮದ ಸ ನಂಃ 36/3 ಸಿ, 6 ಎಕರೆ 12 ಗುಂಟೆ ಜಮೀನನ್ನು ನಮ್ಮ ತಾಯಿಗೆ ಅವರ ತಾಯಿ ತಂದೆ ಕೊಟ್ಟಿದ್ದರು ಅಂದರೆ ಸರಿ. ಆ ಹೊಲವನ್ನು ನಮ್ಮ ತಾಯಿ ನಮ್ಮ ತಂದೆಗೆ ಬಕ್ಷಿಸ ಮಾಡಿದ್ದರು ಅಂದರೆ ಸರಿ. ಆ ಹೊಲದ ಆದಾಯದಿಂದ ಮತ್ತು ನಮ್ಮ ತಾಯಿಗೆ ಕೊಟ್ಟ ಹಣದಿಂದ ನಮ್ಮ ತಂದೆ ಹುಬ್ಬಳ್ಳಿಯ ಅಂಚಟಗೇರಿ ಗ್ರಾಮದ ಸ ನಂಃ 213/2, 5 ಎಕರೆ 13 ಗುಂಟೆ ಜಮೀನನ್ನು ಖರೀದಿ ಮಾಡಿದ್ದರು ಅಂದರೆ ಸರಿ. ಸದರಿ ಜಮೀನಿಗೆ ಒಳ್ಳೆಯ ಹಣ ಬರುತ್ತದೆ ಎಂದು ನಮ್ಮ ತಂದೆ ಆ ಜಮೀನನ್ನು ಮಾರಾಟ ಮಾಡಿದರು ಅಂದರೆ ಸರಿ. ಈ ಹೊಲದಿಂದ ಬಂದ ಹಣದಿಂದ ಮತ್ತು ನಮ್ಮ ತಂದೆಯ ಪಿಂಚಣಿ, ಆದಾಯ ಹಾಗೂ ಉಳಿತಾಯದಿಂದ ದಾವಾ ಆಸ್ತಿಗಳನ್ನು ನಮ್ಮ ತಂದೆ ಖರೀದಿ ಮಾಡಿರುತ್ತಾರೆ ಅಂದರೆ ಸರಿ. ಮುಂದುವರೆದ ನಮ್ಮ ತಾಯಿಯ ಆಸ್ತಿ ಮಾರಾಟ ಮಾಡಿ ಖರೀದಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಇದೇ ಹಣದಿಂದ ಆರ್ ಸಿ ಸಿ ಮನೆ ಕಟ್ಟಿರುತ್ತಾರೆ ಅಂದರೆ ಸರಿ. ಅದು ದಾವಾ ಆಸ್ತಿ ಕ್ರಮ ಸಂಖ್ಯೆ 4 ಇ ಅಂದರೆ ಸರಿ.

**O.S. 369-19** **PW : 1**

7. ಸ ನಂಃ 213 ಅಂಚಟಗೇರಿ ಹೊಲವನ್ನು ಮಾರಾಟ ಮಾಡಿದ ನಂತರ ನಾನು ಹಾಗೂ ನನ್ನ ತಂದೆ ಸೇರಿ ಮಾರಾಟ ಮಾಡಿದವರ ಹಾಗೂ ಖರೀದಿ ಮಾಡಿದವರ ವಿರುದ್ಧ ಒಂದು ಸಿವಿಲ್ ದಾವೆ ನಂಃ 73/2011 ಇದೇ ನ್ಯಾಯಾಲಯದಲ್ಲಿ ಸಲ್ಲಿಸಿದ್ದೇವೆ ಅಂದರೆ, ನಮ್ಮ ತಂದೆ ನಮ್ಮಿಂದ ಹಾಕಿಸಿದ್ದರು ಎಂದು ಹೇಳುತ್ತಾರೆ. ನಮ್ಮ ತಂದೆ ಹಾಕಿಸಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾವು ಸಲ್ಲಿಸಿದ ದಾವೆಯಲ್ಲಿ ನಮ್ಮ ತಂದೆ ಹಾಗೂ ತಮ್ಮ ಯಾವುದೇ ತಕರಾರು ಸಲ್ಲಿಸಿಲ್ಲ ಅಂದರೆ ಸರಿ. ನಮ್ಮ ತಂದೆ ಹೇಳಿ ದಾವೆ ಹಾಕಿಸಿದ್ದು ನಿಜವೇ ಆಗಿದ್ದಲ್ಲಿ ನಮಗೆ ಸಹಕಾರವಾಗುವಾಗ ಹಾಗೇ ಏನಾದರೂ ಮೆಮೋ ಹಾಕುತ್ತಿದ್ದರು ಅಂದರೆ ಸರಿ. ನಮ್ಮ ತಂದೆ - ತಾಯಿ ನಮ್ಮನ್ನು ಪ್ರೀತಿ ವಿಶ್ವಾಸದಿಂದ ಬೆಳೆಸಿದ್ದರೂ ಸಹ ನಾವು ದಾವೆ ಸಲ್ಲಿಸಿದ್ದಕ್ಕೆ ಅವರು ಬೇಜಾರೂಗೊಂಡಿದ್ದರು ಅಂದರೆ ಸರಿಯಲ್ಲ. ಸ ನಂಃ 213/2 ಜಮೀನು ಖರೀದಿದಾರರ ಮುಂದೆ ನಮ್ಮ ತಂದೆ ಗೌರವ ಹೋಯಿತು ಅಂದರೆ ಸರಿಯಲ್ಲ. ಅಸಲು ದಾವೆ ನಂಃ 73/11 ರಲ್ಲಿ ಈ ದಾವೆ ಆಸ್ತಿಗಳನ್ನು ಸೇರಿಸಿಲ್ಲ ಅಂದರೆ ಸರಿಯಲ್ಲ.

8. ನನ್ನ ತಮ್ಮ ಸಿದ್ದಾರ್ಥ ನಮ್ಮ ಜೊತೆ ಚೆನ್ನಾಗಿದ್ದನು. ಗೀತಾ ಹಾಗೂ ನಮಗೆ ನಮ್ಮ ತಂದೆ ಸೈಟ ಕೊಟ್ಟಿದ್ದಕ್ಕೆ ಸಿದ್ದಾರ್ಥ ಜಗಳ ತೆಗೆದಿಲ್ಲ ಹಾಗೂ ಯಾವುದೇ ಸೈಟ ಕೊಟ್ಟಿಲ್ಲ. ಈ ದಾವೆ ಸಲ್ಲಿಸುವಾಗ ಮತ್ತು ಮೊದಲಿನ ದಾವೆ ಸಲ್ಲಿಸುವಾಗ ಪ್ರತಿವಾದಿ 1 ಹಾಗೂ 2 ರವರು ನನ್ನ ಇನ್ನು ಇಬ್ಬರು ತಂಗಿಯರು ಯಾವುದೇ ಪ್ರೊತ್ಸಾಹ ನೀಡಿಲ್ಲವೆಂದರೆ ಸರಿಯಲ್ಲ. ನಮ್ಮ ತಂದೆ -ತಾಯಿ ನಮ್ಮ 5 ಜನರಿಗೆ ಪ್ರೀತಿ -ವಿಶ್ವಾದಸದಿಂದ ನೋಡಿಕೊಂಡಿದ್ದರಿಂದ ಪ್ರತಿವಾದಿ 1 ಹಾಗೂ 2 ಮತ್ತು ವಾದಿ ನಂಃ 2 ರವರು ಯಾರು ಪ್ರೊತ್ಸಾಹ ಕೊಟ್ಟಿಲ್ಲ ಅಂದರೆ ಸರಿಯಲ್ಲ. ಅವರು ದೂರು ಇರುವುದರಿಂದ ಪ್ರತಿವಾದಿಗಳನ್ನಾಗಿ ಮಾಡಿರುತ್ತೇನೆ, ಅವರು ಎರಡು ಸಲ ಕೋರ್ಟಗೆ ಬಂದಿರುತ್ತಾರೆ. ಅವರು ಸಾಕ್ಷಿ ನುಡಿದಿಲ್ಲ. ಸಾಕ್ಷಿ ಕರೆದರೆ ಬರುತ್ತಾರೆ. ಈ ಕೇಸದಲ್ಲಿ ರಾಜಿ ಸಂಧಾನ ಮಾಡಿಲ್ಲ.

9. ಕೋಟಮಚಗಿ ಹೊಲದಿಂದ ಕ್ರಮಸಂಖ್ಯೆಃ 4 ಎ, ಹೊಲದಿಂದ ಲಾವಣಿ ವಾರ್ಷಿಕ 50 ಸಾವಿರ ರೂ. ಬರುತ್ತದೆ. ಕ್ರಮಸಂಖ್ಯೆಃ 4 ಬಿ ಹೂಲದಿಂದ 50 ಸಾವಿರ ರೂ. ಲಾವಣಿ ಬರುತ್ತದೆ. ಸಿದ್ದಾರ್ಥ 2021 ರಲ್ಲಿ 3 ವರ್ಷಗಳ ಹಿಂದೆ ಮರಣ ಹೊಂದಿರುತ್ತಾನೆ. ಆತನಿಗೆ ಹೆಂಡತಿ ಹಾಗೂ 2 ಹೆಣ್ಣು ಮಕ್ಕಳಿದ್ದಾರೆ. ಸಿದ್ದಾರ್ಥ ಮರಣ ಹೊಂದಿದ ನಂತರ ಕುಟುಂಬಕ್ಕೆ 7-8 ಮನೆ ಭಾಡಿಗೆ ಹಣ ಬರುತ್ತದೆ. 7-8 ಮನೆ ಭಾಡಿಗೆ ಬರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇಃನೆ ಅಂದರೆ ಸರಿಯಲ್ಲ. ಎರಡು ಶೆಡ್ ನಂತಹ ಚಿಕ್ಕ ಮನೆಳಿವೆ ಅಂದರೆ ಸರಿಯಲ್ಲ.

**O.S. 369-19** **PW : 1**

ಮೂರು ಅಂಗಡಿ ಭಾಡಿಗೆ ಬರುವುದಿಲ್ಲ ಅಂದರೆ ಸರಿಯಲ್ಲ. ಸದರಿ ಮನೆಗಳು ವಸತಿ ಪ್ರದೇಶದಲ್ಲಿವೆ ಅಂದರೆ ಸರಿ. ಮನೆ ಭಾಡಿಗೆ 800 – 1000 ಬರುತ್ತದೆ ಅಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದರು, ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.